# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| 1. ಚುಕ್ಕೆ ಗುರುತಿನ ಪ್ರಶ್ನೆ | : 963 |
| 2. ಸದಸ್ಯರ ಹೆಸರು | : ಶ್ರೀ ಕೆ.ಎ.ತಿಪ್ಪೇಸ್ವಾಮಿ |
| 3. ಉತ್ತರಿಸುವ ದಿನಾಂಕ | : 21.12.2021 |
| 4. ಉತ್ತರಿಸುವ ಸಚಿವರು | : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು |

**ಕ್ರ.ಸಂ. (ಅ)**

**ಪ್ರಶ್ನೆ:** ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು; (ಸಹಕಾರಿ, ಸರ್ಕಾರಿ ಹಾಗೂ ಖಾಸಗಿ ವಲಯದದಲ್ಲಿರುವ ಕಾರ್ಖಾನೆಗಳ ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) ವಿವಿಧ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಥಗಿತಗೊಂಡಿರುವ ಹಾಗೂ ಲೀಸ್ ಆಧಾರದ ಮೇಲೆ ಇರುವ ಕಾರ್ಖಾನೆಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು)

**ಉತ್ತರ:** ರಾಜ್ಯದಲ್ಲಿ ಒಟ್ಟು 88 ನೋಂದಾಯಿತ ಸಕ್ಕರೆ ಕಾರ್ಖಾನೆಗಳಿದ್ದು, ಇವುಗಳ ಪೈಕಿ 65 ಸಕ್ಕರೆ ಕಾರ್ಖಾನೆಗಳು ಕಾರ್ಯನಿರತವಾಗಿವೆ. ವಲಯವಾರು ವಿವರ ಈ ಕೆಳಕಂಡಂತಿದೆ.

| ಕ್ರಸಂ | ವಲಯ | ಕಾರ್ಯನಿರತ | ಸ್ಥಗಿತ | ಸಮಾಪನೆ | ಒಟ್ಟು |
|---|---|---|---|---|---|
| 1 | ಸಾರ್ವಜನಿಕ ವಲಯ | – | 02 | – | 02 |
| 2 | ಜಂಟಿ ವಲಯ | – | – | 01 | 01 |
| 3 | ಸಹಕಾರಿ ವಲಯ | 13 | 05 | 04 | 22 |
| 4 | ಸಹಕಾರಿ ವಲಯ (ಗುತ್ತಿಗೆ) | 08 | – | – | 08 |
| 5 | ಖಾಸಗಿ ವಲಯ | 44 | 11 | – | 55 |
| | **ಒಟ್ಟು** | **65** | **18** | **05** | **88** |

ವಲಯವಾರು ಕಾರ್ಯನಿರ್ವಹಿಸುತ್ತಿರುವ, ಸ್ಥಗಿತಗೊಂಡಿರುವ, ಗುತ್ತಿಗೆಗೆ ನೀಡಿರುವ ಮತ್ತು ಸಮಾಪನೆಯಲ್ಲಿರುವ ಸಕ್ಕರೆ ಕಾರ್ಖಾನೆಗಳ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ.

**ಕ್ರ.ಸಂ. (ಆ)**

**ಪ್ರಶ್ನೆ:** ರಾಜ್ಯದಲ್ಲಿ ಯಾವ ಯಾವ ಕಾರ್ಖಾನೆಗಳು ಕಳೆದ 5 ವರ್ಷಗಳಿಂದ ಎಷ್ಟು ಪ್ರಮಾಣದಲ್ಲಿ ಕಬ್ಬನ್ನು ಅರಿಯಲಾಗುತ್ತಿದೆ; (ಸಂಪೂರ್ಣ ಮಾಹಿತಿ ನೀಡುವುದು)

**ಉತ್ತರ:** ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ಸಕ್ಕರೆ ಕಾರ್ಖಾನೆಗಳು ಅರೆದಿರುವ ಕಬ್ಬಿನ ಪ್ರಮಾಣ ಮತ್ತು ಉತ್ಪಾದಿಸಿದ ಸಕ್ಕರೆ ಪ್ರಮಾಣದ ವಿವರಗಳು ಈ ಕೆಳಕಂಡಂತಿವೆ:

| ವರ್ಷ | ಕಬ್ಬು ಅರೆದಿರುವ ಪ್ರಮಾಣ (ಮೆ.ಟನ್‌ಗಳಲ್ಲಿ) | ಉತ್ಪಾದಿಸಿದ ಸಕ್ಕರೆ ಪ್ರಮಾಣ (ಮೆ.ಟನ್‌ಗಳಲ್ಲಿ) |
|---|---|---|
| 2016–17 | 20181158 | 2071051 |
| 2017–18 | 35605567 | 3778488 |
| 2018–19 | 41065563 | 4431998 |
| 2019–20 | 33892214 | 3324520 |
| 2020–21 | 44084352 | 429144 |

ಕಾರ್ಖಾನೆವಾರು ಕಬ್ಬು ಅರೆದಿರುವ ಪ್ರಮಾಣ ಮತ್ತು ಉತ್ಪಾದಿಸಿದ ಸಕ್ಕರೆ ಪ್ರಮಾಣದ ವಿವರಗಳನ್ನು **ಅನುಬಂಧ-2 ಮತ್ತು 3** ರಲ್ಲಿ ಒದಗಿಸಿದೆ.

**ಕ್ರ.ಸಂ. (ಇ)**

**ಪ್ರಶ್ನೆ:** ಈ ಸಕ್ಕರೆ ಕಾರ್ಖಾನೆಗಳಿಂದ ಪ್ರತಿ ವರ್ಷ ಒಟ್ಟು ಉತ್ಪಾದನೆಯಾಗಿರುವ ಸಕ್ಕರೆ ಪ್ರಮಾಣವೆಷ್ಟು; ಹಾಗೂ ಕೋ-ಜನರೇಷನ್‌ದಿಂದ ಉತ್ಪಾದನೆಯಾಗುತ್ತಿರುವ ವಿವಿಧ ಉತ್ಪನ್ನಗಳ ಪ್ರಮಾಣವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

**ಉತ್ತರ:** ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 65 ಸಕ್ಕರೆ ಕಾರ್ಖಾನೆಗಳ ಪೈಕಿ 53 ಸಕ್ಕರೆ ಕಾರ್ಖಾನೆಗಳಲ್ಲಿ ಸಹ-ವಿದ್ಯುತ್ (Co-generation) ಘಟಕಗಳನ್ನು ಹೊಂದಿದ್ದು, ಇವುಗಳ ಒಟ್ಟು ಉತ್ಪಾದನಾ ಸಾಮರ್ಥ್ಯ 1516.22 ಮೆ.ವ್ಯಾಟ್‌ಗಳಾಗಿರುತ್ತದೆ. ಸದರಿ ಸಹ-ವಿದ್ಯುತ್ ಘಟಕಗಳಿಂದ ವಿದ್ಯುತ್ ಅನ್ನು ಮಾತ್ರ ಉತ್ಪಾದಿಸಲಾಗುತ್ತಿದ್ದು, ಯಾವುದೇ ಉಪ ಉತ್ಪನ್ನಗಳನ್ನು ಉತ್ಪಾದಿಸುತ್ತಿರುವುದಿಲ್ಲ.

ಕಾರ್ಖಾನೆವಾರು ಸಹ-ವಿದ್ಯುತ್ ಘಟಕಗಳ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ವಿವರಗಳನ್ನು **ಅನುಬಂಧ-4** ರಲ್ಲಿ ಒದಗಿಸಿದೆ.

**(ಈ)** ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು ಕಳೆದ 5 ವರ್ಷಗಳಿಂದ ರೈತರಿಗೆ ಪಾವತಿಸಬೇಕಾಗಿರುವ ಬಾಕಿ ಮೊತ್ತವೆಷ್ಟು; ಈ ಬಾಕಿ ಇರುವ ಮೊತ್ತವನ್ನು ರೈತರಿಗೆ ತಲುಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಕಾರ್ಖಾನೆವಾರು ಸಂಪೂರ್ಣ ಮಾಹಿತಿ ನೀಡುವುದು)

ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು ಕಳೆದ 5 ವರ್ಷಗಳಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾಗಿರುವ, ಪಾವತಿಸಿರುವ ಹಾಗೂ ಬಾಕಿ ಕಬ್ಬು ಬಿಲ್ಲಿನ ವಿವರಗಳು ಈ ಕೆಳಕಂಡಂತಿವೆ:

(ರೂ.ಕೋಟಿಗಳಲ್ಲಿ)

| ಕ್ರಸಂ | ಹಂಗಾಮು | ಪಾವತಿಸಬೇಕಾದ ಮೊತ್ತ | ಪಾವತಿಸಿದ ಮೊತ್ತ | ಬಾಕಿ ಇರುವ ಮೊತ್ತ |
|---|---|---|---|---|
| 1 | 2016-17 | 5,343.07 | 6,702.84 | ಇರುವುದಿಲ್ಲ |
| 2 | 2017-18 | 9,851.83 | 10,605.12 | ಇರುವುದಿಲ್ಲ |
| 3 | 2018-19 | 11,948.39 | 12,083.79 | 8.93 |
| 4 | 2019-20 | 10,428.96 | 10,671.94 | 5.80 |
| 5 | 2020-21 | 13,324.49 | 13,533.08 | ಇರುವುದಿಲ್ಲ |

**ಷರಾ:** 2016-17 ರಿಂದ 2020-21 ನೇ ಸಾಲುಗಳಲ್ಲಿ ಕೆಲವು ಸಕ್ಕರೆ ಕಾರ್ಖಾನೆಗಳು ಕೇಂದ್ರ ಸರ್ಕಾರವು ನಿಗದಿಪಡಿಸಿದ ಎಫ್.ಆರ್.ಪಿ. ದರಕ್ಕಿಂತ ಹೆಚ್ಚಿಗೆ ಕಬ್ಬಿನ ಬಿಲ್ಲನ್ನು ರೈತರಿಗೆ ಪಾವತಿಸಿರುತ್ತವೆ.

**2016-17** ಮತ್ತು **2017-18ನೇ** ಹಂಗಾಮುಗಳಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಸಕ್ಕರೆ ಕಾರ್ಖಾನೆಗಳು ಕಬ್ಬು ಬಿಲ್ಲು ಮೊತ್ತವನ್ನು ಪೂರ್ಣವಾಗಿ ತೀರುವಳಿ ಮಾಡಿರುತ್ತವೆ. ಆದ್ದರಿಂದ ಈ ಸಾಲುಗಳಲ್ಲಿ ಯಾವುದೇ ಬಾಕಿ ಇರುವುದಿಲ್ಲ.

**2018-19ನೇ** ಹಂಗಾಮಿಗೆ ರೂ.11948.39 ಕೋಟಿಗಳನ್ನು ಕಬ್ಬು ಬೆಳೆಗಾರ ರೈತರಿಗೆ ಪಾವತಿಸಬೇಕಾಗಿದ್ದು, ಈ ಪೈಕಿ ರೂ.12083.79 ಕೋಟಿಗಳನ್ನು ಪಾವತಿಸಲಾಗಿದೆ. ಪಾವತಿಯ ಪ್ರಮಾಣವು ಶೇ.99.93 ಆಗಿರುತ್ತದೆ. ನಾಲ್ಕು ಸಕ್ಕರೆ ಕಾರ್ಖಾನೆಗಳಿಂದ ರೂ.8.93 ಕೋಟಿಗಳಷ್ಟು ಕಬ್ಬಿನ ಬಿಲ್ಲನ್ನು ರೈತರಿಗೆ ಪಾವತಿಸುವುದು ಬಾಕಿ ಇದ್ದು, ಕಾರ್ಖಾನೆವಾರು ವಿವರಗಳು ಈ ಕೆಳಕಂಡಂತಿರುತ್ತವೆ.

(ರೂ.ಕೋಟಿಗಳಲ್ಲಿ)

| ಕ್ರಸಂ | ಕಾರ್ಖಾನೆಯ ಹೆಸರು | ಬಾಕಿ ಮೊತ್ತ |
|---|---|---|
| 1 | ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಳ್ಳಿಖೇಡ್, ಹುಮಾನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ. | 0.89 |
| 2 | ಭವಾನಿ ಶುಗರ್ಸ್ ಲಿ., ಬರೂರ, ಬೀದರ್ ಜಿಲ್ಲೆ. | 1.80 |
| 3 | ಸಾವರೀನ್ ಇಂಡಸ್ಟ್ರೀಸ್ ಲಿ., ತೇರದಾಳ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | 4.99 |
| 4 | ಧ್ಯಾನಯೋಗಿ ಶಿವಕುಮಾರ ಸ್ವಾಮೀಜಿ ಶುಗರ್ಸ್ ಲಿ., ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ | 1.25 |
| | **ಒಟ್ಟು** | **8.93** |

ಬಾಕಿ ಉಳಿಸಿಕೊಂಡಿರುವ ನಾಲ್ಕು ಸಕ್ಕರೆ ಕಾರ್ಖಾನೆಗಳ ವಿರುದ್ಧ ವಸೂಲಾತಿ ಪ್ರಮಾಣ ಪತ್ರವನ್ನು ಹೊರಡಿಸಿ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಆದಾಗ್ಯೂ, ಕಬ್ಬು ಬಿಲ್ಲು ಪಾವತಿಸದೇ ಇರುವುದರಿಂದ ಈ ನಾಲ್ಕು ಕಾರ್ಖಾನೆಗಳಿಗೆ ಅಂದಿನ ಮಾನ್ಯ ಪೌರಾಡಳಿತ ಮತ್ತು ಸಕ್ಕರೆ ಸಚಿವರು ದಿನಾಂಕ:09.06.2021ರಂದು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಚರ ಮತ್ತು ಸ್ಥಿರಾಸ್ತಿಗಳನ್ನು ಹರಾಜು ಪ್ರಕ್ರಿಯೆಗೆ ಒಳಪಡಿಸಿ ಕಬ್ಬು ಬಿಲ್ಲು ವಸೂಲಾತಿಗೆ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಿರುತ್ತಾರೆ. ಈ ನಾಲ್ಕು ಸಕ್ಕರೆ ಕಾರ್ಖಾನೆಗಳು ಪ್ರಸ್ತುತ ನಿಷ್ಕ್ರಿಯವಾಗಿದ್ದು, ಬಾಕಿ ವಸೂಲಾತಿಗೆ ಎಲ್ಲಾ ಅಗತ್ಯ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

......3

| | | |
|---|---|---|
| | | **2019-20ನೇ** ಹಂಗಾಮಿನಲ್ಲಿ ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ, ಬೈಲಹೊಂಗಲ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಕಾರ್ಖಾನೆಯು ರೂ.5.80 ಕೋಟಿಗಳನ್ನು ಪಾವತಿಸುವುದನ್ನು ಬಾಕಿ ಉಳಿಸಿಕೊಂಡಿರುತ್ತದೆ. ಕಾರ್ಖಾನೆಯು ಕಬ್ಬಿನ ಬಾಕಿ ಬಿಲ್ಲನ್ನು ಪಾವತಿ ಮಾಡದೇ ಇರುವುದರಿಂದ ಕಬ್ಬು (ನಿಯಂತ್ರಣ) ಆದೇಶ 1966ರ ಕಲಂ 3(8) ರ ಅವಕಾಶಗಳ ರೀತ್ಯಾ ಕಬ್ಬು ಬಿಲ್ಲು ಬಾಕಿ ವಸೂಲಾತಿಗಾಗಿ ದಿನಾಂಕ:06.09.2021 ರಂದು ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರಿಗೆ ವಸೂಲಾತಿ ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿಗಳ ಮೂಲಕ ನೀಡಲಾಗಿದೆ. ಈ ಕಾರ್ಖಾನೆಯು ಕಬ್ಬು ಬಿಲ್ಲು ಪಾವತಿಸದೇ ಇರುವುದರಿಂದ ಕಬ್ಬು ನಿಯಂತ್ರಣ ಆದೇಶ 1966 ಕಲಂ 3(8)ರ ಅವಕಾಶ ರಿತ್ಯಾ ಕಬ್ಬು ಬಿಲ್ಲು ಬಾಕಿ ವಸೂಲಾತಿಗಾಗಿ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರ ಮೂಲಕ ವಸೂಲಾತಿ ದೃಢೀಕರಣ ಪತ್ರವನ್ನು ದಿನಾಂಕ:06.09.2021 ರಂದು ಹೊರಡಿಸಲಾಗಿದೆ. ಸದರಿ ಆದೇಶವನ್ನು ಪ್ರಶ್ನಿಸಿ ಕಾರ್ಖಾನೆಯ ಆಡಳಿತ ಮಂಡಳಿಯು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠ ಇಲ್ಲಿ ರಿಟ್ ಅರ್ಜಿ ಸಂಖ್ಯೆ.104662/2021 ಅನ್ನು ದಾಖಲಿಸಿದ್ದು, ಸದರಿ ರಿಟ್ ಅರ್ಜಿಯು ಇತ್ಯರ್ಥಕ್ಕೆ ಬಾಕಿ ಇರುತ್ತದೆ.<br>**2020-21ನೇ** ಹಂಗಾಮಿಗೆ 64 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸಿದ್ದು ದಿನಾಂಕ: 30.11.2021ರ ಅಂತ್ಯಕ್ಕೆ ರೂ.13402.22 ಕೋಟಿಗಳನ್ನು ರೈತರಿಗೆ ಪಾವತಿಸಬೇಕಾಗಿದ್ದು, ಈ ಪೈಕಿ ರೂ.13533.08 ಕೋಟಿಗಳಷ್ಟು ಪಾವತಿಸುವ ಮೂಲಕ ಸಂಪೂರ್ಣವಾಗಿ ಕಬ್ಬು ಬಿಲ್ಲನ್ನು ಪಾವತಿಸಿರುತ್ತವೆ. ಪಾವತಿಯ ಪ್ರಮಾಣವು ಶೇ.100 ರಷ್ಟಿರುತ್ತದೆ. ಕೆಲವೊಂದು ಕಾರ್ಖಾನೆಗಳಿಂದ ಕೇಂದ್ರ ಸರ್ಕಾರವು ನಿಗದಿಪಡಿಸಿದ ಎಫ್.ಆರ್.ಪಿ. ದರಕ್ಕಿಂತ ಹೆಚ್ಚಿಗೆ ಹಣವನ್ನು ರೈತರಿಗೆ ಪಾವತಿಸಲಾಗಿದೆ.<br>**2021-22ನೇ** ಹಂಗಾಮು ನವೆಂಬರ್-2021ರಿಂದ ಪ್ರಾರಂಭವಾಗಿದ್ದು, ಈವರೆವಿಗೂ 65 ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸಿರುತ್ತವೆ. ಈ ಕಾರ್ಖಾನೆಗಳು ದಿನಾಂಕ:15.11.2021 ರವರೆಗೆ ಒಟ್ಟು 112.39 ಲಕ್ಷ ಮೆ.ಟನ್ ಕಬ್ಬು ನುರಿಸಿ, 9.60 ಲಕ್ಷ ಮೆ.ಟನ್ ಸಕ್ಕರೆ ಉತ್ಪಾದಿಸಿ, ಶೇ.8.54 ರಷ್ಟು ಇಳುವರಿಯನ್ನು ಪಡೆದಿರುತ್ತವೆ. ಈ ಅವಧಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಕಾರ್ಖಾನೆಗಳು ಕೇಂದ್ರ ಸರ್ಕಾರವು ನಿಗದಿಪಡಿಸಿರುವ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯಂತೆ (ಎಫ್.ಆರ್.ಪಿ) ಪಾವತಿಸಬೇಕಾದ ಕಬ್ಬು ಬಿಲ್ಲು ಮೊತ್ತ ರೂ.3475.53 ಕೋಟಿಗಳಾಗಿದ್ದು, ಈ ಪೈಕಿ ರೂ.1546.96 ಕೋಟಿಗಳಷ್ಟು ಪಾವತಿಸಿರುತ್ತವೆ. ಬಾಕಿ ಮೊತ್ತ ರೂ. 1928.57 ಕೋಟಿಗಳಷ್ಟಿರುತ್ತದೆ. 2021-22 ನೇ ಹಂಗಾಮು ನವೆಂಬರ್ ಮೊದಲನೆ ವಾರದಲ್ಲಿ ಪ್ರಾರಂಭವಾಗಿದ್ದು, ಪ್ರಸ್ತುತ ಚಾಲ್ತಿಯಲ್ಲಿರುವುದರಿಂದ ಕಾರ್ಖಾನೆಗಳು ರೈತರ ಕಬ್ಬು ಬಿಲ್ಲನ್ನು ನಿಯಮಾನುಸಾರ ಪ್ರತಿ 14 ದಿನಗಳಿಗೊಮ್ಮೆ ಪಾವತಿಸಲು ಕ್ರಮ ಕೈಗೊಳ್ಳುತ್ತಿವೆ. ಒಂದು ವೇಳೆ ಪಾವತಿ ಮಾಡದೆ ಇದ್ದಲ್ಲಿ ಕಬ್ಬು (ನಿಯಂತ್ರಣ) ಆದೇಶ 1966ರ ಪ್ರಕಾರ ಶಾಸನ ಬದ್ಧ ನೋಟೀಸ್‌ನ್ನು ಜಾರಿಗೊಳಿಸಿ ಪಾವತಿಗೆ ಕ್ರಮ ಜರುಗಿಸಲಾಗುವುದು. |

.....4

| | | |
|---|---|---|
| (ಉ) | ರಾಜ್ಯದಲ್ಲಿ ಅನುಉತ್ಪಾದಿತ ಸಕ್ಕರೆ ಕಾರ್ಖಾನೆಗಳನ್ನು ಬಲಪಡಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸಿರುವ ಯೋಜನೆ ಮತ್ತು ಕಾರ್ಯಕ್ರಮಗಳು ಯಾವುವು; ಈ ಯೋಜನೆಯಡಿ ಕಳೆದ 5 ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಪಡೆದಿರುವ ಅನುದಾನವೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು) | ದುಡಿಯುವ ಬಂಡವಾಳದ ಕೊರತೆ ಮತ್ತು ಆರ್ಥಿಕ ದುಸ್ಥಿತಿಯಿಂದಾಗಿ ಸ್ಥಗಿತಗೊಂಡು ಅನುತ್ಪಾದಕವಾಗಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಕಬ್ಬು ಬೆಳೆಗಾರ ರೈತರ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಖಾಸಗಿ ಅವರಿಗೆ ದೀರ್ಘಾವಧಿಯ ಮೇಲೆ ಗುತ್ತಿಗೆ ನೀಡುವುದರ ಮೂಲಕ ಪುನಶ್ಚೇತನಗೊಳಿಸುವುದು ಸರ್ಕಾರದ ಪ್ರಸ್ತುತ ನೀತಿಯಾಗಿರುತ್ತದೆ.<br>ಅದರಂತೆ ದುಡಿಯುವ ಬಂಡವಾಳದ ಕೊರತೆ ಮತ್ತು ಆರ್ಥಿಕ ದುಸ್ಥಿತಿಯಿಂದಾಗಿ ಸ್ಥಗಿತಗೊಂಡಿದ್ದ ಒಟ್ಟು 08 ಸಕ್ಕರೆ ಕಾರ್ಖಾನೆಗಳನ್ನು ಇದುವರೆಗೆ ಖಾಸಗಿಯವರಿಗೆ ಗುತ್ತಿಗೆ ನೀಡಲಾಗಿದೆ.<br>ಪ್ರಸ್ತುತ, ಶ್ರೀರಾಮ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಚುಂಚನಕಟ್ಟೆ, ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ ಮತ್ತು ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ರನ್ನನಗರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ – ಈ ಕಾರ್ಖಾನೆಗಳನ್ನು ಖಾಸಗಿಯವರಿಗೆ ಗುತ್ತಿಗೆ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br>ಅನುತ್ಪಾದಿತ ಸಕ್ಕರೆ ಕಾರ್ಖಾನೆಗಳನ್ನು ಬಲಪಡಿಸುವ ಸಲುವಾಗಿ ಕೇಂದ್ರ ಸರ್ಕಾರದಿಂದ ಕಳೆದ ಐದು ವರ್ಷಗಳಲ್ಲಿ ಯಾವುದೇ ಅನುದಾನ ಮಂಜೂರಾಗಿರುವುದಿಲ್ಲ. |

**ಸಂಖ್ಯೆ: ಸಿಐ 363 ಸಿಓಎಫ್ 2021**

(ಶಂಕರ ಬ.ಪಾಟೀಲ ಮುನೇನಕೊಪ್ಪ)

**ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು**